


ಆಸ್ಟ್ರೇಲಿಯಾದ ವಸ್ತುಸಂಗ್ರಹಾಲಯದಲ್ಲಿ ಮೂಲನಿವಾಸಿಗಳ ಚರಿತ್ರೆಯ ಪ್ರದರ್ಶನದ ಆಲೋಚನೆ ಯಾವುದೋ ಬುದ್ಧಿವಂತ ತಲೆಗೆ ಬಂತು. ಇನ್ನೇಕೆ ತಡ, ಲಿಂಗ ಬದಲಾವಣೆ ಮಾಡಿಕೊಂಡವನನ್ನೇ ಮೂಲನಿವಾಸಿ ಎಂದು ನಿಲ್ಲಿಸಲಾಯಿತು. ಮೂಲನಿವಾಸಿಗಳಿಗೆ ಡಿಸೈನರ್ ಉಡುಪು ಒದಗಿಸುತ್ತಿದ್ದ ಡಿಸೈನರ್ ಯಾರೋ?

ಬಾಂಗ್ಲಾದೇಶದ ವೇಶ್ಯಾವಾಟಿಕೆಯಲ್ಲಿ ಹೊಸ ಹುಡುಗಿ ಬಂದೊಡನೆ ಭವ್ಯವಾದ ಉಪಚಾರ ನಡೆಯುತ್ತದೆ. ಮೊದಲು ಸ್ಟೀರಾಯ್ಡ್ ಗುಳಿಗೆಗಳನ್ನು ನುಂಗಿಸುವ ಸಂಭ್ರಮ. ಅದೂ ಹಸುಗಳನ್ನು ಕೊಬ್ಬಿಸಲು ಬಳಸುವ ಸ್ಟೀರಾಯ್ಡ್ ಮಾತ್ರೆ. ವಯಸ್ಸಾದ ಮಹಿಳೆಯರಿಗೆ ಇದು ಪರಿಣಾಮಕಾರಿಯಂತೆ. ಯುವತಿಯರಿಗೆ ಚುಚ್ಚುಮದ್ದೇ ಬೇಕಂತೆ. ಸಂಶೋಧನೆಗೆ ಪ್ರಯೋಗಾಲಯವೇ ಬೇಕಾಗಿಲ್ಲ, ಅಲ್ಲವೇ?



ರೋಮ್‌ನಲ್ಲಿ ಅಕ್ಷರಶಃ ಯೂರೊ ಮಳೆ ಸುರಿಯಿತು ಸ್ವರ್ಗದಿಂದ. 2.5 ಕೋಟಿ ಯುರೊ ನಾಣ್ಯಗಳನ್ನು ಒಯ್ಯುತ್ತಿದ್ದ ಲಾರಿ ಮುಗ್ಗರಿಸಿತು. ರಸ್ತೆಯಲ್ಲಿ ನಾಣ್ಯಗಳ ಉರುಳಾಟ. ಕ್ಷಣಾರ್ಧದಲ್ಲಿ ಅವೆಲ್ಲ ದಾರಿಹೋಕರ ಜೇಬು ತುಂಬಿದವು. ಆರ್ಥಿಕ ಹಿಂಜರಿತದಿಂದ ನರಳುತ್ತಿದ್ದ ಇಟಲಿಯ ಮೇಲೆ ದೇವರು ಕೃಪೆ ತೋರಿಸಿದ್ದಾನೆ ಎಂದೇ ದೈನಿಕಗಳು ಬರೆದವಂತೆ.

ಇರಾನಿನಲ್ಲಿ ಈಗ ಎಲ್ಲರ ತಲೆಗೂ ಒಂದೇ ಕಟ್, ಅದು ಸರ್ಕಾರ ಆದೇಶಿಸಿರುವ ಕಟ್. ಬಗೆಬಗೆ ಕೇಶ ವಿನ್ಯಾಸ ಏಕೆ, ಒಂದೇ ಸಾಕು ಎಂದು ಏಕರೂಪ ಕೇಶವಿನ್ಯಾಸ ಸಂಹಿತೆ ಅಲ್ಲಿ ಜಾರಿಯಾಗಿದೆ. ಕೇಶ ವಿನ್ಯಾಸಕರು ಆ ನಟನ ಕಟ್, ಈ ರಾಜಕಾರಣಿ ಕಟ್, ಅಂದಕಾಲತ್ತಿನ ಸಾಹಿತಿಯ ಕಟ್ ಎಂದೆಲ್ಲ ಬೋರ್ಡ್ ಬರೆಸಿ ಗ್ರಾಹಕರ ಜೇಬು ಕಟ್ ಮಾಡುವುದಕ್ಕೆ ಸರ್ಕಾರ ಕತ್ತರಿ ಹಾಕಿದೆ.





ಮಿಚಿಗನ್‌ನಲ್ಲಿ ಸೆಕೆಯಿಂದ ಪಾರು ಕಮ್ ಪುಟಾಣಿ ಕೆಸರು ಸುಂದರಿ ಸ್ಪರ್ಧೆ ನಡೆಯಿತು. ಕಿರೀಟ ತೊಡಿಸುವಾಗ ಮುಖದಲ್ಲಿ ಅಚ್ಚರಿ ಸೂಚಿಸಿ, ಕಣ್ಣಲ್ಲಿ ನೀರು ತುಳುಕಿಸಿ, ಇಷ್ಟಗಲ ಬಾಯಿ ತೆರೆಯುವ ತರಬೇತಿ ಆಗಿರಲಿಲ್ಲವಂತೆ ಈ ಪುಟಾಣಿಗೆ.

ಜರ್ಮನ್‌ಗೂ, ಕಾಶ್ಮೀರಕ್ಕೂ ಏನು ಸಂಬಂಧ? ವಿಶ್ವಕಪ್ ಫುಟ್ಬಾಲ್ ಪಂದ್ಯದಲ್ಲಿ ಜರ್ಮನಿಯ ಕೋಚ್ ನೀಲಿ ಕಾಶ್ಮೀರ ಸ್ವೆಟರ್ ಧರಿಸಿದ್ದನಂತೆ. ಗೆಲುವಿನ ಮೇಲೆ ಗೆಲುವು ಸಾಧಿಸಿದ್ದರಿಂದ ಜರ್ಮನಿಯಲ್ಲಿ 199 ಯುರೊ ಬೆಲೆಯ ಈ ಸ್ವೆಟರ್ ಮಾರಾಟ ಭರದಿಂದ ಸಾಗಿತು. ಸೆಮಿಫೈನಲ್‌ನಲ್ಲಿ ಜರ್ಮನಿ ಮುಗ್ಗರಿಸಿದ್ದರಿಂದ ಸ್ವೆಟರ್ ಕಥೆ ಏನಾಯ್ತು? ವಿವರ ಕೊಡಲು ಸ್ಟಾಕೇ ಇಲ್ಲ ಅಂಗಡಿಗಳಲ್ಲಿ.



ಹಾಲಿವುಡ್ ನಟಿ ಲಿಂಡ್ಸೆ ಲೋಹಾನ್ ಕುಡಿದು ವಾಹನ ಚಾಲನೆ ಮಾಡಿದ್ದಕ್ಕೆ ಅಮೆರಿಕದ ಕೋರ್ಟೊಂದು 90 ದಿನಗಳ ಸೆರೆ ಶಿಕ್ಷೆ ವಿಧಿಸಿತು. ಕೋರ್ಟ್‌ನಲ್ಲೇ ಅತ್ತ ಲಿಂಡ್ಸೆಯ ನಡುವಿನ ಕೈಬೆರಳ ಮೇಲೆ 'ಫ...' ಎಂಬ ಅಶ್ಲೀಲ ಶಬ್ದ ಅಚ್ಚು ಹಾಕಿದ್ದು ಕ್ಯಾಮೆರಾ ಕಣ್ಣಿಗೆ ಬಿತ್ತು. ನ್ಯಾಯಾಧೀಶರಿಗೆ ಇನ್ನೊಂದು ಪ್ರಕರಣ ಸಿಕ್ಕಂತಾಯ್ತು. ಕೃಪೆ: ಛಾಯಾಗ್ರಾಹಕರು.

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@deccanherald.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65